# ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

ಸಿಸಿ ನಂ.948/2016

| | | | |
|---|---|---|---|
| ಚಾಸಾ | **20** | ಪ್ರಾಸಾ | **9** |
| ಹೆಸರು | | ದೀಪಕ್ ಆರ್ | |
| ತಂದೆಯ ಹೆಸರು | | ರಾಮು | |
| ವಯಸ್ಸು | | **42**ವರ್ಷಗಳು | |
| ಉದ್ಯೋಗ | | ಪೊಲೀಸ್ ಇನ್ಸ್‌ಪೆಕ್ಟರ್**,** ಸಿಐಡಿ ಬೆಂಗಳೂರು | |
| ವಿಳಾಸ | | ಬೆಂಗಳೂರು | |

ದಿನಾಂಕ**.27.07.2026**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು ದಿನಾಂಕ**.25.06.2014** ರಿಂದ **07.07.2017**ರ ವರೆಗೆ ಕೋಡಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ**.**

ದಿನಾಂಕ**.21.05.2015**ರಂದು ಈ ಕೇಸಿನ ಕಡತವನ್ನು ಚಾಸಾ**-18** ರವರಿಂದ ಪಡೆದುಕೊಂಡು ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ**.**

ಆದೇ ದಿನ ಕೃತ್ಯ ಸ್ಥಳವಾದ ಕನಕಪುರ ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿ, ಕೊರಟಗೆರೆದೊಡ್ಡಿ ಗ್ರಾಮದ ಕದೀರಮ್ಮ ರವರು ವಾಸಿಸುವ ಮನೆಯ ಮುಂದೆ ಹಾಯ್ದು ಹೋಗಿರುವ ಮುಳ್ಳಹಳ್ಳಿ ರಸ್ತೆಯಲ್ಲಿ ಬೆಳಿಗ್ಗೆ **12.15** ರಿಂದ **12.45** ಗಂಟೆಯ ವರೆಗೆ ಪಂಚರಾದ ಚಾಸಾ-**5** ಮತ್ತು **6** ರವರ ಸಮಕ್ಷಮ ಚಾಸಾ-**1** ರವರು ತೋರಿಸಿದ ಜಾಗದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ.

ನಂತರ ಠಾಣೆಗೆ ಬಂದು ಈ ಕೃತ್ಯದಲ್ಲಿ ಭಾಗಿಯಾಗಿದ್ದ ದ್ವಿಚಕ್ರ ವಾಹನದ ಸವಾರ ರಜನಿಕಾಂತ್ ರವರು ಕೃತ್ಯಕ್ಕೆ ಉಪಯೋಗಿಸಿದ ವಾಹನದ ಜೊತೆಗೆ ತಾನೇ ಖುದ್ದಾಗಿ ಠಾಣೆಗೆ ಹಾಜರಾಗಿದ್ದು, ಸದರಿ ಠಾಣೆಯ ಮುಂಭಾಗ ವಾಹನವನ್ನು ಚಾಸಾ-**7** ಮತ್ತು **8** ರವರ ಸಮಕ್ಷಮ ಮಹಜರ್ ಕ್ರಿಯೆ ಜರುಗಿಸಿ ಜಪ್ತು ಪಡಿಸಿಕೊಂಡಿರುತ್ತೇನೆ. ಸದರಿ ಮೊಟಾರ್ ವಾಹನ ಹೊಂಡಾ ಸಿಬಿ ಟ್ರಿಗರ್ ಕೆಎ-**05**-ಜೆಬಿ-**7691** ಕಪ್ಪು ಬಣ್ಣದ ವಾಹನವಾಗಿದ್ದು, ಸದರಿ ವಾಹನವನ್ನು ಮಧ್ಯಾಹ್ನ **2.00** ರಿಂದ **2.45** ರ ಸಮಯದಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತೇನೆ.

ನಂತರ ಸದರಿ ಆರೋಪಿಯನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ವಾಹನವನ್ನು ಇಂಡಿಮಿನಿಟಿ ಬಾಂಡ್ ಮೇಲೆ ಸದರಿ ವಾಹನದ ಮಾಲೀಕರಿಗೆ ನೀಡಿರುತ್ತೇನೆ. ನಂತರ ಕೇಸಿನ ಗಾಯಾಳು ಕದೀರಮ್ಮ ಮೃತಪಟ್ಟಿದ್ದು, ದಿನಾಂಕ.**25.05.2015**ರಂದು ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಿಗ್ಗೆ **6.30** ರಿಂದ **8.30** ರವರೆಗೆ ಪಂಚರಾದ ಚಾಸಾ-**9** ರಿಂದ **11** ರವರ ಸಮಕ್ಷಮ ಶವಪಂಚನಾಮೆಯನ್ನು

ಜರುಗಿಸಿದ್ದು, ಆ ಕಾಲದಲ್ಲಿ ಸಾಕ್ಷಿದಾರರಾದ ಚಾಸಾ-12 ರಿಂದ 14 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ನಂತರ ಘೋರ ಪ್ರಕರಣವಾದ ಕಾರಣ ಕಡತವನ್ನು ಚಾಸಾ-21 ರವರಿಗೆ ಹಸ್ತಾಂತರಿಸಿರುತ್ತೇನೆ.

ನಿಪಿ-3 ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ನಿಪಿ-9 ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು.

ನಿಪಿ-10 ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

ನಿಪಿ-5 ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಎ.ಆರ್.ಕೆ ರವರಿಂದಃ-</u>

ಸ್ಥಳ ಪಂಚನಾಮೆ ಮಾಡಲು ಕಡತ ಪಡೆದ ದಿನವೇ ಹೋಗಿರುತ್ತೇನೆ. ಮಹಜರ್‌ನ್ನು ಮಧ್ಯಾಹ್ನ 12.15 ರಿಂದ 12.45ರ ಸಮಯದಲ್ಲಿ ಮಾಡಿರುತ್ತೇನೆ. ಸ್ಥಳ ಪಂಚನಾಮೆಯ ಕಾಲಕ್ಕೆ ಇದ್ದ ಚಾಸಾ-5 ಮತ್ತು 6 ರವರು ಮೃತ ಸಂಬಂಧಿಕರು ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯನ್ನು ನೀವು ಸ್ಥಳದಲ್ಲಿ ಮಾಡಿರುವುದಿಲ್ಲ, ಠಾಣೆಯಲ್ಲಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಸಿಬ್ಬಂದಿ ಬರೆದಿರುತ್ತಾರೆ, ಅವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ್ಥಳ ಪಂಚನಾಮೆಯನ್ನು ಪಿಸಿ-434 ರವರು ಬರೆದಿರುತ್ತಾರೆ, ಅವರ ಹೆಸರು ನೆನಪಿಲ್ಲ. ಸ್ಥಳ ಪಂಚನಾಮೆಯ ಸಾಕ್ಷಿದಾರರ ವಿಳಾಸಗಳನ್ನು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಈ ಪ್ರಕರಣದ ಪಿರ್ಯಾದಿಯಾಗಿರುವ ಕಾರಣ ಅವರ ವಿಳಾಸ ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಪಂಚರಿಗೆ ಮಹಜರ್ ಸ್ಥಳಕ್ಕೆ ಬರಲು ನೀವು ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿ.

ನಕಾಶೆಯನ್ನು ಪಂಚನಾಮೆ ಮಾಡಿದ ದಿನವೇ ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ನಕಾಶೆಯನ್ನು ಪಿಸಿ-434 ರವರು ಮಾಡಿರುತ್ತಾರೆ, ಅವರ ಹೆಸರು ನನಗೆ ಈಗ ನೆನಪಿಲ್ಲ. ನಕಾಶೆ ಮಾಡುವಾಗ ಪಂಚರು ಸಹ ಹಾಜರಿದ್ದರು. ಅವರ ಸಹಿಯನ್ನು ನಕಾಶೆಗೆ ತೆಗೆದುಕೊಂಡಿಲ್ಲ ಎಂದರೆ ಸರಿ. ನಕಾಶೆಯನ್ನು ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಮೃತ ವ್ಯಕ್ತಿಗೆ ಸಹಾಯ ಮಾಡಲೆಂದು ಪಂಚನಾಮೆ

ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ತೋರಿಸಿದ ಸ್ಥಳದಲ್ಲಿ ಅಪಘಾತ ಆಗಿಲ್ಲ ಮತ್ತು ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನೀವು ಜಪ್ತು ಪಡಿಸಿಕೊಂಡಿರುವ ವಾಹನ ಜಖಂ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಜಪ್ತು ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಪಿಸಿ-**434** ರವರು ಬರೆದಿರುವುದಾಗಿ ನುಡಿಯುತ್ತಾರೆ. ಚಾಸಾ-**7** ಮತ್ತು **8** ರವರು ಯಡಮಾರನಹಳ್ಳಿ ಮತ್ತು ಕಲ್ಲಿಗೌಡನದೊಡ್ಡಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಜಪ್ತು ಪಂಚನಾಮೆಯನ್ನು ಠಾಣೆಯ ಅವರಣದಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಚಾಸಾ-**7** ಮತ್ತು **8** ರವರು ಠಾಣೆಯ ಬಳಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-**7** ಮತ್ತು **8** ರವರಿಗೆ ಮೇಮೊ ನೀಡಿಲ್ಲ ಎಂದರೆ ಸರಿ. ಜಪ್ತು ಪಂಚನಾಮೆಯನ್ನು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ-**12** ರಿಂದ **14** ರವರ ಹೇಳಿಕೆಗಳನ್ನು ಪಡೆಯುವ ಮುಂಚೆ ಅವರಿಗೆ ಮೇಮೊ ನೀಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚಾಸಾ-**12** ರಿಂದ **14** ರವರು ಹೇಳಿದಂತ ಹೇಳಿಕೆಗಳನ್ನು ಮಾತ್ರ ಪಡೆದಿರುವುದಾಗಿ ನುಡಿಯುತ್ತಾರೆ. ಮೂರು ಜನರ ಹೇಳಿಕೆಗಳನ್ನು ಒಂದೇ ದಿನ ಪಡೆದಿರುತ್ತೇನೆ. ಸದರಿ ಹೇಳಿಕೆಗಳನ್ನು ಕೈ ಬರಹದಲ್ಲಿ ಪಡೆದುಕೊಂಡಿರುತ್ತೇನೆ. ಪಿಸಿ-**434** ರವರು ಸದರಿ ಹೇಳಿಕೆಗಳನ್ನು ಬರೆದಿರುತ್ತಾರೆ. ಅವರ ಹೆಸರು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಚಾಸಾ-**12** ರಿಂದ **14** ರವರು ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮೃತನ ಕುಟುಂಬಕ್ಕೆ ಸಹಾಯಕ ಮಾಡಲು ಮತ್ತು ಈ ಪ್ರಕರಣವನ್ನು ಬೆಳಸಲು ಸಾಕ್ಷಿದಾರರ

ಹೇಳಿಕೆಗಳನ್ನು ಪಡೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯ ಸಂಬಂಧಿಕರಿಗೆ ಪರಿಹಾರ ಸಿಗಲಿ ಎಂದು ನ್ಯಾಯಾಲಯದಲ್ಲಿ ಸುಳ್ಳು ದಾಖಲೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

**(**ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.**)**

**ಓ ಹೇ ಕೇ ಸರಿ ಇದೆ,**

**(ವಿನಯ್ ವಿಠಲ್ ಕುಂದಾಪುರ)**
**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**